ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಳಗಾವಿ ಜಿಲ್ಲೆ, ಬೆಳಗಾವಿ-590 001

ದೂರವಾಣಿ: 0831-2407270 email: belgaum.dssp@gmail.com

ನಂ.ಕಂಶಾ/ಲೋಇ/ವಿವ-01/2021-22 ದಿನಾಂಕ: 5.06.2021 7

ಇವರಿಗೆ,

ಕಾರ್ಯನಿರ್ವಾಹಕ ಅಭಿಯಂತರರು
ಲೋಕೋಪಯೋಗಿ ಇಲಾಖೆ
ಬೆಳಗಾವಿ ವಿಭಾಗ, ಬೆಳಗಾವಿ

| | |
|---|---|
| ಕಾರ್ಯಕಾರಿ ಅಭಿಯಂತರರು | |
| ತಾ. ಸ. | |
| ಅಧೀಕ್ಷಕರು | 12/07/2021 |
| ಲೆ. ಅಧೀಕ್ಷಕರು | |
| ವಿ. ನಿರ್ವಾಹಕರು | AE2 |
| ಒಳಬಂದ ಸಂಖ್ಯೆ | |
| ದಿನಾಂಕ | |

ವಿಷಯ: Construction fo Foot Bridge across a local Nala on alternative pathway connection from Nersa village to Kongala and Gavali Village in Khanapur Taluka

ಉಲ್ಲೇಖ:1) ತಮ್ಮ ಕಾರ್ಯಾಲಯದ ಪತ್ರ ಸಂಖ್ಯೆ:ಕ್ರಸಂ.ಲೋಇ/ವಿ/ಬೆ/ಎಇ-2/2020 ದಿ:06.03.2021

2) ಉಪವಿಭಾಗಾಧಿಕಾರಿಗಳು, ಬೆಳಗಾವಿ ಉಪವಿಭಾಗ, ಬೆಳಗಾವಿ ಇವರ ಪತ್ರದ ಸಂಖ್ಯೆ:ಕ್ರ.ಎಲ್.ಎನ್.ಡಿ/ಸಿಆರ್/12/2021-22 ದೂ:08.06.2021

3) ತಹಶೀಲ್ದಾರ್ ಖಾನಾಪೂರ, ಇವರ ಪತ್ರದ ಸಂ:ನಂ/ಎಲ್.ಎನ್.ಡಿ/ಸಿಆರ್ 15/2021-22 ದಿ:15.05.2021

*********

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ (1) ರ ತಮ್ಮ ಪತ್ರದಲ್ಲಿ ಬೆಳಗಾವಿ ಜಿಲ್ಲೆ ಖಾನಾಪೂರ ತಾಲ್ಲೂಕಿನ ಅರಣ್ಯ ಪ್ರದೇಶದ ಹಾಗೂ ಗ್ರಾಮೀಣ ಜನರ ಶಾಲಾ-ಕಾಲೇಜ್ ಮಕ್ಕಳಿಗೆ ಹಾಗೂ ಗ್ರಾಮಸ್ಥರು ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಿಗೆ ಮಳೆಗಾಲದಲ್ಲಿ ಸಂಚರಿಸಲು ಬಹಳ ತೊಂದರೆಯಾಗುತ್ತಿರುವ ಕಾರಣ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ "ಶಾಲಾ ಸಂಪರ್ಕ ಸೇತು" ಯೋಜನೆಯಡಿ ನಾಲಾಗೆ ಅಡ್ಡಲಾಗಿ ಕಾಲುಸಂಕ ನಿರ್ಮಾಣ ಮಾಡಲು ಸರ್ಕಾರದಿಂದ ಅನುಮೋದನೆ ನೀಡಿರುತ್ತಾರೆ. ಕಾರಣ ಖಾನಾಪೂರ ತಾಲ್ಲೂಕಿನ ನೇರಸಾ ಗ್ರಾಮದ ಅರಣ್ಯ ಪ್ರದೇಶದಲ್ಲಿನ ಕೊಂಗಳಾ ಮತ್ತು ಗಾವಳಿ ಗ್ರಾಮಕ್ಕೆ ಸಂಪರ್ಕಿಸುವ ಕಾಲುದಾರಿಗೆ ಭಂಡುರಾ ನಾಲಾಗೆ ಹಾಗೂ ಸ್ಥಾನಿಕ ನಾಲಾಗೆ ಅಡ್ಡಲಾಗಿ ನಿರ್ಮಿಸಲಾಗುತ್ತಿದ್ದು, ಪ್ರಸ್ತಾಪಿತ ಕಾಮಗಾರಿಗೆ ಅರಣ್ಯ ಪ್ರದೇಶ ಹೊರತು ಪಡಿಸಿ ಅರಣ್ಯೇತರ ಪ್ರದೇಶ ಇರುವುದಿಲ್ಲಾ. ಆದ್ದರಿಂದ ಸದರಿ ಕಾಮಗಾರಿಗೆ ಅರಣ್ಯ ಪ್ರದೇಶ ಹೊರತುಪಡಿಸಿ ಅರಣ್ಯೇತರ ಪ್ರದೇಶ ಇಲ್ಲದೇ ಇರುವ ಬಗ್ಗೆ ಪ್ರಮಾಣ ಪತ್ರ ನೀಡಲು ವಿನಂತಿಸಿರುತ್ತೀರಿ.

ಈ ಕುರಿತು ವರದಿ ಸಲ್ಲಿಸುವಂತೆ ದಿನಾಂಕ:03.04.2021 ರಂದು ಉಪವಿಭಾಗಾಧಿಕಾರಿಗಳು, ಬೆಳಗಾವಿ ಹಾಗೂ ತಹಶೀಲ್ದಾರ್ ಖಾನಾಪೂರ ಇವರಿಗೆ ಪತ್ರ ಬರೆಯಲಾಗಿತ್ತು. ಅದರಂತೆ ಉಲ್ಲೇಖ (2) ಹಾಗೂ (3) ರಡಿ ಸಲ್ಲಿಸಿದ ವರದಿಯಲ್ಲಿ, ನೇರಸೆ ಗ್ರಾಮದಿಂದ ಕೊಂಗಳಾ ಹಾಗೂ ಗವಾಳಿ ಗ್ರಾಮಕ್ಕೆ ಕಾಲು ಸೇತುವೆ ನಿರ್ಮಾಣ ಮಾಡಲು ಸರ್ಕಾರವು ಅನುಮೋದನೆ ನೀಡಿದ ಪ್ರಕಾರ ಸದರಿ ಭಂಡೂರಾ ನಾಲಗೆ ಹಾಗೂ ಸ್ಥಾನಿಕ ನಾಲಕ್ಕೆ ಅಕ್ಕ-ಪಕ್ಕ ಅರಣ್ಯ ಇಲಾಖೆಯ ಜಮೀನು ಇರುತ್ತದೆ. ಸದರಿ ನಾಲಾ ಸುತ್ತ ಮುತ್ತ ಅರಣ್ಯೇತರ ಪ್ರದೇಶ ಇರುವುದಿಲ್ಲಾ ಎಂದು ಸ್ಥಳ ತನಿಖಾ ವರದಿಯೊಂದಿಗೆ ಸಲ್ಲಿಸಿರುತ್ತಾರೆ.

ಕಾರಣ ಉಲ್ಲೇಖಿತ (2) ಹಾಗೂ (3) ರ ವರದಿ ಮೇರೆಗೆ ಬೆಳಗಾವಿ ಜಿಲ್ಲೆ ಖಾನಾಪೂರ ತಾಲ್ಲೂಕಿನ ನೇರಸಾ ಗ್ರಾಮದ ಅರಣ್ಯ ಪ್ರದೇಶದಲ್ಲಿನ ಕೊಂಗಳಾ ಮತ್ತು ಗಾವಳಿ ಗ್ರಾಮದ ಸುತ್ತಮುತ್ತಲಿನ ಪ್ರದೇಶವು ಅರಣ್ಯ ಪ್ರದೇಶ ಹೊರತುಪಡಿಸಿ ಅರಣ್ಯೇತರ ಪ್ರದೇಶ ಇರುವುದಿಲ್ಲ ಎಂದು ತಿಳಿಸುತ್ತಾ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

ಜಿಲ್ಲಾಧಿಕಾರಿಗಳು ಬೆಳಗಾವಿ